# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ

### ಡಿಸೆಂಬರ್ ೨೦, ೨೦೧೬ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೬ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| ೧. | ಡಾ.ಮಲ್ಲಿಕಾ. ಎಸ್.ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | ಅಧ್ಯಕ್ಷರು |
| ೨. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | ಸದಸ್ಯರು |
| ೬. | ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕ.ವಿ.ಹಂ. | ಸದಸ್ಯರು |
| ೭. | ಡಾ. ಅಶೋಕಕುಮಾರ್ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ | ಸದಸ್ಯರು |
| ೮. | ಡಾ. ಸಿ.ಮಹದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | ಸದಸ್ಯರು |
| ೯. | ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ | ಆಹ್ವಾನಿತ ಸದಸ್ಯರು |
| ೧೦. | ಕುಲಸಚಿವರು, ಕ.ವಿ.ಹಂ | ಸದಸ್ಯ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು**

| | | |
|---|---|---|
| ೧. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ : ೦೯.೦೮.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೫ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.

ದಿನಾಂಕ : ೦೯.೦೮.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೫ ಸಭೆಯ ನಡೆವಳಿಗಳಿಗೆ ಸಂಬಂಧಿಸಿ ಸಮಾಜ ವಿಜ್ಞಾನ ನಿಕಾಯದ ಡೀನರು ದಿನಾಂಕ ೨೫.೦೮.೨೦೧೬ರಂದು ಪತ್ರ ನೀಡಿ ತಾತ್ಕಾಲಿಕ ವಾಹನ ಚಾಲಕ ಹುದ್ದೆ ಅನುಸೂಚಿತ ಜನಾಂಗ (ಪರಿಶಿಷ್ಟ ಪಂಗಡ)ದ ಅಭ್ಯರ್ಥಿಗೆ ಮೀಸಲಾಗಿರುವಂತೆ ೧೮೫.೨೭ರಲ್ಲಿ ಸಭೆಯು ನಿರ್ಣಯಸಿತ್ತು. ಆದರೆ ನಿರ್ಣಯದಲ್ಲಿ ದಾಖಲಾಗಿರುವುದಿಲ್ಲ ಎಂದು ಪತ್ರದಲ್ಲಿ ದಾಖಲಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಚರ್ಚೆಯ ಬಳಿಕ ಮುಂದಿನ ಸಾರಿ ಚಾಲಕರ ನೇಮಕಾತಿ ಮಾಡುವಾಗ ನಿಯಮಾನುಸಾರ ಮೀಸಲಾತಿಯನ್ನು ಪಾಲಿಸಲು ಮತ್ತು ಇದುವರೆಗೆ ವಂಚಿತವಾಗಿರುವ ಸಮುದಾಯಕ್ಕೆ ನ್ಯಾಯ ನೀಡುವಂತೆ ಕ್ರಮವಹಿಸಲು ಸೂಚಿಸಿ, ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

ದಿನಾಂಕ : ೦೯.೦೮.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೪ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.

ದಿನಾಂಕ : ೦೯.೦೮.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೪ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧೮೬.೦೧ : ದಿನಾಂಕ ೧೧.೧೧.೨೦೧೬ರಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನ್ ಸಮಿತಿ ಸಭೆಯ ನಡೆವಳಿ ಸ್ಥಿರೀಕರಣ ಹಾಗೂ ಅನುಮೋದನೆ ಕೋರಿ.

ನಿರ್ಣಯ : ದಿನಾಂಕ ೧೧.೧೧.೨೦೧೬ರಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನ್ ಸಮಿತಿ ಸಭೆಯ ನಡೆವಳಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

೧೮೬.೦೨ : ೨೫ನೇ ನುಡಿಹಬ್ಬ ಮತ್ತು ೨೦೧೬-೧೭ನೇ ಸಾಲಿನ ಘಟಿಕೋತ್ಸವ ಕುರಿತು.

ನಿರ್ಣಯ : ೧. ನಾಡೋಜ ಪದವಿಗೆ ಸಲ್ಲಿಕೆಯಾದ ೭೪ ಅರ್ಜಿಗಳನ್ನು ಸಭೆಯಲ್ಲಿ ಮಂಡಿಸಿ ಸದರಿ ಅರ್ಜಿಗಳನ್ನು ಪರಿಶೀಲನಾ ಸಮಿತಿಗೆ ನೀಡಲು ಅನುಮೋದನೆ ಪಡೆಯಲಾಯಿತು.

೨. ____________ ಇವರನ್ನು ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ನಾಡೋಜ ಪದವಿಯ ಅರ್ಜಿಗಳ ಪರಿಶೀಲನಾ ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಯಿತು (ನಾಮ ನಿರ್ದೇಶಿತರ ಹೆಸರನ್ನು ಗೌಪ್ಯತೆಯ ದೃಷ್ಟಿಯಿಂದ ಘನತೆವೆತ್ತ ರಾಜ್ಯಪಾಲರಿಗೆ ಪ್ರತ್ಯೇಕ ಪತ್ರದ ಮೂಲಕ ಕಳುಹಿಸಲಾಗಿದೆ).

೩. ೨೦೧೬-೧೭ನೇ ಸಾಲಿನ ಘಟಿಕೋತ್ಸವ ಭಾಷಣ ಮಾಡಲು ಸೂಕ್ತವಾದವರನ್ನು ಆಯ್ಕೆಮಾಡಿ ಆಹ್ವಾನಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ಸಭೆ ಸರ್ವಾನುಮತದಿಂದ ನಿರ್ಣಯಿಸಿತು.

೧೮೬.೦೩. : ೨೦೧೬-೧೭ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಡಿಪ್ಲೋಮಾ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್‌ಗಳನ್ನು ಆರಂಭಿಸುವ ಕುರಿತು.

ನಿರ್ಣಯ : ೧೮೫ ನೇ ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ೨೦೧೬ ಡಿಸೆಂಬರ್ ತಿಂಗಳಿಂದ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ತರಗತಿಗಳಿಗೆ ಅರ್ಜಿಗಳನ್ನು ಕರೆಯಲಾಗಿದ್ದನ್ನು ಸಭೆ ಗಮನಿಸಿತು. ಪ್ರವೇಶ ಶುಲ್ಕ ಹೆಚ್ಚಾಗಿರುವ ಬಗ್ಗೆ ವಿದ್ಯಾರ್ಥಿಗಳು ಶುಲ್ಕ ಕಡಿಮೆ ಮಾಡುವಂತೆ ಕೋರಿದ ಮನವಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಆರಂಭಿಕ ಹಂತದಲ್ಲಿ ಶುಲ್ಕಗಳನ್ನು ಅಗತ್ಯಕ್ಕೆ ತಕ್ಕಂತೆ ಕಡಿಮೆ ಮಾಡಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲಾಯಿತು.

೧೮೬.೦೪ : ೨೦೧೬-೧೭ನೇ ಸಾಲಿನಲ್ಲಿ ಮೌಖಿಕ ಪರೀಕ್ಷೆ ನಡೆಸಿ ಹೊರಡಿಸಲಾಗಿರುವ ಪಿಎಚ್.ಡಿ., ಡಿ.ಲಿಟ್ ಅಧಿಸೂಚನೆಗಳಿಗೆ ಅನುಮೋದನೆ ಕೋರಿ.

ನಿರ್ಣಯ : ಮೌಖಿಕ ಪರೀಕ್ಷೆ ನಡೆಸಿದ ಡಿ.ಲಿಟ್ ಮತ್ತು ಪಿಎಚ್.ಡಿ ಪದವಿಗಳಿಗೆ ಅನುಮೋದನೆ ನೀಡಲಾಯಿತು.

೧೮೬.೦೫ : ೨೦೧೬-೧೭ನೇ ಸಾಲಿನ ರೂಸಾ ಅನುದಾನದ ಮರುಹಂಚಿಕೆಗೆ ಅನುಮೋದನೆ ಕೋರಿ.

ನಿರ್ಣಯ : ೨೦೧೬-೧೭ನೇ ಸಾಲಿನ ರೂಸಾ ಅನುದಾನದ ಮರುಹಂಚಿಕೆ ಪ್ರಸ್ತಾವಕ್ಕೆ ಸಭೆ ಅನುಮೋದನೆ ನೀಡಲಾಯಿತು.

೧೮೬.೦೬ : ೧೮೫ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದಂತೆ ವಿಷಯ ೧೮೫.೩೦, ೧೮೫.೩೫, ೧೮೫.೩೬ರ ಪ್ರಕರಣಗಳಿಗೆ ಸಂಬಂಧಿಸಿ ದಿನಾಂಕ ೧೯.೧೧.೨೦೧೬ರಂದು ನಡೆದ ತಜ್ಞರ ಸಮಿತಿ ನೀಡಿರುವ ಶಿಫಾರಸ್ಸನ್ನು ಮಂಡಿಸಿ ಕಾರ್ಯಕಾರಿ ಸಮಿತಿ ನಿರ್ಣಯವನ್ನು ಕೋರಿದೆ.

(೧. ಅಧ್ಯಾಪಕರ ತಡೆಹಿಡಿದಿರುವ ಇಂಕ್ರಿಮೆಂಟ್ ಮಂಜೂರಾತಿ ಕುರಿತು. ೨. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಇದರ ನಿರ್ದೇಶಕರು ಪತ್ರ ಬರೆದು ಪಂಚಾಯತ್‌ರಾಜ್ ಸ್ಟಡೀಸ್ ಡಿಪ್ಲೊಮಾ ಕೋರ್ಸ್‌ಗೆ ೨೦೧೧-೧೨ನೇ ಸಾಲಿನಲ್ಲಿ ನೀಡಿದ ಅನುದಾನವನ್ನು ಬಡ್ಡಿಯೊಂದಿಗೆ ಹಿಂದಿರುಗಿಸಲು ಕೋರಿರುವ ಕುರಿತು. ೩. ಶ್ರೀ ಎಂ.ಸಿ. ಗುಡಿಮನಿ ಇವರು ಸಹಾಯಕ ಗ್ರಂಥಪಾಲಕರ ನೇಮಕಾತಿಯನ್ನು ಸಿಂಧುಗೊಳಿಸಲು ಕೋರಿರುವ ಮನವಿಗಳ ಕುರಿತು.)

ನಿರ್ಣಯ : ಈ ಮೂರು ಪ್ರಕರಣಗಳಲ್ಲಿ ಸ್ಪಷ್ಟವಾದ ಶಿಫಾರಸ್ಸನ್ನು ಸಮಿತಿ ನೀಡದಿರುವುದರಿಂದ ಹೊಸದಾಗಿ ಸಮಿತಿಯೊಂದನ್ನು ರಚಿಸಿ ಶಿಫಾರಸ್ಸು ಪಡೆಯಲು ಮಾನ್ಯ ಕುಲಪತಿ ಅವರಿಗೆ ಸಮಿತಿ ಅಧಿಕಾರ ನೀಡಿತು.

೧೮೬.೦೭ : ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುವ ಕಾರ್ಯಕ್ರಮ, ಸಭೆಗಳಿಗೆ ಸಂಬಂಧಿಸಿದಂತೆ ಹೊರಗಿನಿಂದ ಆಗಮಿಸುವ ಹಿರಿಯ ವಿದ್ವಾಂಸರಿಗೆ ನಿಯಮಾನುಸಾರ ನೀಡುತ್ತಿರುವ ಸಂಭಾವನೆ, ಸಭಾಭತ್ಯೆ, ಪ್ರಯಾಣ ಭತ್ಯೆಗಳು ವಾಸ್ತವ ನಿಜವೆಚ್ಚಗಳಿಗಿಂತ ಅತ್ಯಂತ ಕಡಿಮೆಯಿದ್ದು, ಇವುಗಳನ್ನು ನಿರ್ವಹಿಸುವ ಬಗೆಗೆ ಕಾರ್ಯಕಾರಿ ಸಮಿತಿಯ ನಿರ್ಣಯ ಕೋರಿದೆ.

ನಿರ್ಣಯ : ಆಯಾ ಸಂದರ್ಭದ ಅಗತ್ಯಗಳನ್ನು ಗಮನಿಸಿ ಸಂಭಾವನೆಗಳನ್ನು ನಿಗದಿಪಡಿಸಲು ಮಾನ್ಯ ಕುಲಪತಿ ಅವರಿಗೆ ಅಧಿಕಾರ ನೀಡಲಾಯಿತು.

೧೮೬.೦೮ : ಬೋಧಕೇತರ ಸಿಬ್ಬಂದಿಗಳ ಕಾಲಬದ್ಧ ವೇತನ ಬಡ್ತಿ (ಟೈಂ-ಬಾಂಡ್) ಅನುಶಾಸನ ರಚಿಸುವ ಕುರಿತು.

ನಿರ್ಣಯ : ಬೋಧಕೇತರ ಸಿಬ್ಬಂದಿಗಳ ಕಾಲಬದ್ಧ ವೇತನ ಬಡ್ತಿ ನೀಡಲು ಸರ್ಕಾರದ ಅನುಮತಿ ಪಡೆದು ಕ್ರಮವಹಿಸಲು ಸಭೆ ಸೂಚಿಸಿತು.

೧೮೬.೦೯ : ಶ್ರೀ ಜೈನುಲ್ಲಾ ಬಳ್ಳಾರಿ, ವಿಜ್ಞಾನ ಸಂಗಾತಿ ಸಂಪಾದಕರು ಇವರು ಸಂಭಾವನೆ ಹೆಚ್ಚಿಸಲು ಮನವಿ ಸಲ್ಲಿಸಿರುವ ಬಗ್ಗೆ.

ನಿರ್ಣಯ : ಈಗಾಗಲೇ ಈ ಹಿಂದೆ ನೀಡಿದ ಮನವಿಯನ್ನು ಪರಿಶೀಲಿಸಲಾಗಿದ್ದು ವಿಜ್ಞಾನ ಸಂಗಾತಿಯ ಪ್ರಸರಣ ಸಂಖ್ಯೆ ೨೦೦೦ದಷ್ಟು ದಾಟಿದ ನಂತರ ಆರ್ಥಿಕ ಹೊರೆಯಾಗದಂತೆ ಮುಂದಿನ ದಿನಗಳಲ್ಲಿ ಸಂಭಾವನೆಯನ್ನು ಮಾಡಬಹುದು. ಈಗ ಯಥಾಸ್ಥಿತಿ ಮುಂದುವರೆಸಲು ಸಭೆ ನಿರ್ಣಯಿಸಿತು.

೧೮೬.೧೦ : ಡಾ. ಎ.ವೆಂಕಟೇಶ, ಉಪಕುಲಸಚಿವರು ಇವರು ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಗೆ ನಿಯೋಜನೆ ಕೋರಿರುವ ಬಗ್ಗೆ.

ನಿರ್ಣಯ : ಪ್ರತಿನಿಯೋಜನೆ ಕೋರಿದ ಉಪ ಕುಲಸಚಿವರ ಅರ್ಜಿಯನ್ನು ಪರಿಶೀಲಿಸಿದ ಸಭೆಯು ಸದ್ಯಕ್ಕೆ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಈ ಪ್ರಸ್ತಾವವನ್ನು ಕೈಬಿಡಲು ನಿರ್ಣಯಿಸಲಾಯಿತು.

೧೮೬.೧೧ : ಶ್ರೀ ಬಾಬು ಸಾಬ್, ಪ್ಲಂಬರ್ ಇವರು ಪ್ಲಂಬರ್ ಹುದ್ದೆಯನ್ನು 'ಡಿ' ದರ್ಜೆಯಿಂದ 'ಸಿ' ದರ್ಜೆಗೆ ಮೇಲ್ದರ್ಜೆಗೇರಿಸಲು ಕೋರಿಕೆ ಸಲ್ಲಿಸಿರುವ ಬಗ್ಗೆ.

ನಿರ್ಣಯ : ಶ್ರೀ ಬಾಬು ಸಾಬ್, ಪ್ಲಂಬರ್ ಇವರು ಪ್ಲಂಬರ್ ಹುದ್ದೆಯನ್ನು 'ಡಿ' ದರ್ಜೆಯಿಂದ 'ಸಿ' ದರ್ಜೆಗೆ ಮೇಲ್ದರ್ಜೆಗೇರಿಸಲು ಕೋರಿಕೆಯನ್ನು ಪರಿಶೀಲಿಸಿದ ಸಭೆಯು ಸರ್ಕಾರ/ಸಂಬಂಧಿಸಿದ ಇಲಾಖೆಗೆ ಪತ್ರಬರೆದು ಅದರ ನಿರ್ದೇಶನದನ್ವಯ ಕ್ರಮವಹಿಸಲು ಸಭೆ ನಿರ್ಣಯಿಸಲಾಯಿತು.

೧೮೬.೧೨ : ಪಿಚ್ಚಗುಂಟ್ಲು, ಹೆಳವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಕಾರ್ಯವನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರು ಯೋಜನೆಯನ್ನು ಕೈಗೊಳ್ಳಲು ಕನ್ನಡ ವಿಶ್ವವಿದ್ಯಾಲಯವನ್ನು ಕೋರಿ ಕೊಂಡಿದ್ದು ಅನುಮೋದನೆ ಕೋರಿ.

ನಿರ್ಣಯ : ಸದರಿ ಪ್ರಸ್ತಾವವನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯದ ಸಂಬಂಧಿಸಿದ ವಿಭಾಗದಿಂದ ಕ್ರಮವಹಿಸಲು ಅನುಮೋದನೆ ನೀಡಿತು.

೧೮೬.೧೩ : ವಿಶ್ವವಿದ್ಯಾಲಯದ ಆವರಣಕ್ಕೆ ರಕ್ಷಣಾ ಸೇವೆ ನಿರ್ವಹಿಸಲು ಇ-ಟೆಂಡರ್ ಮುಖಾಂತರ ಮೆ॥ ಸಬೀರ ಸೆಕ್ಯೂರಿಟಿ ಸರ್ವೀಸಸ್ ಅಂಡ್ ಗ್ಯಾಂಗ್ ಕೂಲೀಸ್ ಬಳ್ಳಾರಿ ಹಾಗೂ ಕಸಗೂಡಿಸುವ ಕಾರ್ಯವನ್ನು ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವೀಸಸ್ ಅಂಡ್ ಮ್ಯಾನ್ ಪವರ್ ಏಜೆನ್ಸಿ, ಕಲಬುರ್ಗಿ ಇವರಿಗೆ ೧೨ ತಿಂಗಳ ಅವಧಿಗೆ ಗುತ್ತಿಗೆಯನ್ನು ನೀಡಿದ್ದು ಅನುಮೋದನೆ ಕೋರಿ.

ನಿರ್ಣಯ : ಈ ಪ್ರಕ್ರಿಯೆಗಳಿಗೆ ಸಭೆ ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳ ನಿರ್ಣಯಗಳು**

೧೮೬.೧೪ : ಪಿಎಚ್.ಡಿ ಪದವಿಗೆ ವಿಶೇಷಾರ್ಹತೆ ನಿಯಮಾವಳಿಗೆ ಅನುಮೋದನೆ ಕೋರಿ.

ನಿರ್ಣಯ : ಪಿಎಚ್.ಡಿ ಪದವಿಗೆ ವಿಶೇಷಾರ್ಹತೆ ನಿಯಮಾವಳಿಗಳನ್ನು ಪರಿಶೀಲಿಸಿದ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೧೮೬.೧೫ : ದಿನಾಂಕ ೨೧.೧೦.೨೦೧೬ರಂದು ನಡೆದ ಖರೀದಿ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಹಾಗೂ ಅನುಮೋದನೆ ಕೋರಿ.

ನಿರ್ಣಯ : ದಿನಾಂಕ ೨೧.೧೦.೨೦೧೬ರಂದು ನಡೆದ ಖರೀದಿ ಸಮಿತಿ ಸಭೆಯ ನಡೆವಳಿಗಳಿಗಳ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

೧೮೬.೧೬ : ಜೆ.ಆರ್.ಎಫ್. ಶಿಷ್ಯವೇತನದಿಂದ ಎಸ್.ಆರ್.ಎಫ್. ಶಿಷ್ಯವೇತನಕ್ಕೆ ಬಡ್ತಿ ಪಡೆಯಲು ದಿನಾಂಕ ೭.೧೨.೨೦೧೬ರಂದು ನಡೆದ ಶಿಷ್ಯವೇತನ ಅರ್ಹತಾ ಪರಿಶೀಲನಾ ಸಮಿತಿ ಸಭೆಯ ವರದಿಗೆ ಸ್ಥಿರೀಕರಣ ಹಾಗೂ ಅನುಮೋದನೆ ಕೋರಿ.

ನಿರ್ಣಯ : ಜೆ.ಆರ್.ಎಫ್. ಶಿಷ್ಯವೇತನದಿಂದ ಎಸ್.ಆರ್.ಎಫ್. ಶಿಷ್ಯವೇತನಕ್ಕೆ ಬಡ್ತಿ ಪಡೆಯಲು ದಿನಾಂಕ ೭.೧೨.೨೦೧೬ರಂದು ನಡೆದ ಶಿಷ್ಯವೇತನ ಅರ್ಹತಾ ಪರಿಶೀಲನಾ ಸಮಿತಿ ಸಭೆಯ ವರದಿಯ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

೧೮೬.೧೭ : ದಿನಾಂಕ ೩೧.೦೮.೨೦೧೬ರಂದು ನಡೆದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಸಲಹಾ ಸಮಿತಿಯ ನಡೆವಳಿಯ ಸ್ಥಿರೀಕರಣ ಹಾಗೂ ಅನುಮೋದನೆ ಕೋರಿ.

ನಿರ್ಣಯ : ದಿನಾಂಕ ೩೧.೦೮.೨೦೧೬ರಂದು ನಡೆದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಸಲಹಾ ಸಮಿತಿಯ ನಡೆವಳಿಯ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

೧೮೬.೧೮ : ಭಾಷಾ ನಿಕಾಯ, ಸಮಾಜ ವಿಜ್ಞಾನಗಳ ನಿಕಾಯ ಮತ್ತು ಲಲಿತಕಲೆಗಳ ನಿಕಾಯಗಳ ಬಾಹ್ಯ ಮಾರ್ಗದರ್ಶಕರ ಆಯ್ಕೆ ಪಟ್ಟಿ ಅನುಮೋದನೆ ಕೋರಿ.

ನಿರ್ಣಯ : ಭಾಷಾ ನಿಕಾಯ, ಸಮಾಜ ವಿಜ್ಞಾನಗಳ ನಿಕಾಯ ಮತ್ತು ಲಲಿತಕಲೆಗಳ ನಿಕಾಯಗಳ ಬಾಹ್ಯ ಮಾರ್ಗದರ್ಶಕರ ಆಯ್ಕೆ ಪಟ್ಟಿಗೆ ಸಭೆ ಸರ್ವಾನುಮತದಿಂದ ಅನುಮೋಟನೆ ನೀಡಿತು.

| | | |
|---|---|---|
| ೧೮೬.೧೯ | : | ರೂಸಾ ಅನುದಾನದಲ್ಲಿ ನಿರ್ಮಿಸುತ್ತಿರುವ ವಿವಿಧ ನಿಕಾಯಗಳ ತರಗತಿಗಳ ಸಂಕೀರ್ಣ, ಅಕ್ಷರ ಗ್ರಂಥಾಲಯ, ಭುವನ ವಿಜಯ ಕಟ್ಟಡಗಳ ನವೀಕರಣ ಹಾಗೂ ಇತರ ಕಟ್ಟಡಗಳ ಕಾಮಗಾರಿಗಳ ಅನುಮೋದನೆ ಕೋರಿ. |
| ನಿರ್ಣಯ | : | ರೂಸಾ ಅನುದಾನದಲ್ಲಿ ನಿರ್ಮಿಸುತ್ತಿರುವ ವಿವಿಧ ನಿಕಾಯಗಳ ತರಗತಿಗಳ ಸಂಕೀರ್ಣ, ಅಕ್ಷರ ಗ್ರಂಥಾಲಯ, ಭುವನ ವಿಜಯ ಕಟ್ಟಡಗಳ ನವೀಕರಣ ಹಾಗೂ ಇತರ ಕಟ್ಟಡಗಳ ಕಾಮಗಾರಿಗಳ ಮರುವಿಂಗಡಣೆ ಪ್ರಸ್ತಾವಕ್ಕೆ ಸಭೆ ಅನುಮೋದನೆ ನೀಡಿತು. |
| ೧೮೬.೨೦ | : | ಎಂ.ಎ. ಪಿಎಚ್.ಡಿ ಮಹಿಳಾ ಅಧ್ಯಯನ ಪಠ್ಯಕ್ರಮಕ್ಕೆ ಅನುಮೋದನೆ ಕೋರಿ. |
| ನಿರ್ಣಯ | : | ಎಂ.ಎ. ಪಿಎಚ್.ಡಿ ಮಹಿಳಾ ಅಧ್ಯಯನ ಪಠ್ಯಕ್ರಮಕ್ಕೆ ಸಭೆ ಅನುಮೋದನೆ ನೀಡಿತು. |
| ೧೮೬.೨೧ | : | ಬೀದರ್ ಮಾನ್ಯತಾ ಕೇಂದ್ರದ ವಿದ್ಯಾರ್ಥಿಯ ಪಿಎಚ್.ಡಿ. ಅಧ್ಯಯನ ರದ್ಧತಿಯ ಮರುಪರಿಶೀಲನೆ ಕುರಿತು. |
| ನಿರ್ಣಯ | : | ಪಿಎಚ್.ಡಿ. ಅಧ್ಯಯನದ ರದ್ಧತಿಹೊಂದಿದ ಬೀದರ್ ಮಾನ್ಯತಾ ಕೇಂದ್ರದ ವಿದ್ಯಾರ್ಥಿಯ ಅಧ್ಯಯನ ಬರವಣಿಗೆಯನ್ನು ಬಹುತೇಕ ಮುಗಿದಿರುವ ಕಾರಣ ವಿದ್ಯಾರ್ಥಿಯ ಹಿತದೃಷ್ಟಿಯಿಂದ ಇದೊಂದು ವಿಶೇಷ ಪ್ರಕರಣ ಎಂದು ಭಾವಿಸಿ ಪಿಎಚ್.ಡಿ ಅಧ್ಯಯನ ಮುಂದುವರೆಸಲು ಸಭೆ ಅನುಮತಿ ನೀಡಿತು.<br><br>ಮಾನ್ಯತಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮತ್ತು ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ದೂರು ಸಲ್ಲಿಸುತ್ತಿರುವುದರಿಂದ ಇಂಥ ಪ್ರಕರಣಗಳನ್ನು ಕೂಲಂಕಶವಾಗಿ ಪರಿಶೀಲಿಸಿ ತಪ್ಪಿತಸ್ಥ ಮಾನ್ಯತಾ ಕೇಂದ್ರಗಳ ಮೇಲೆ ಸೂಕ್ತ ಕ್ರಮವಹಿಸಲು ಸಭೆ ನಿರ್ಣಯಿಸಿತು. |
| ೧೮೬.೨೨ | : | ದಿನಾಂಕ : ೧೯-೧೨-೨೦೧೬ ರಂದು ನಡೆದ ೨೦೧೬-೧೭ನೇ ಸಾಲಿನ ೨ನೇ ತ್ರೈಮಾಸಿಕ ಹಣಕಾಸು ಸಮಿತಿ ನಡಾವಳಿಯ ಸ್ಥಿರೀಕರಣ ಹಾಗೂ ಅನುಮೋದನೆ ಕೋರಿ. |
| ನಿರ್ಣಯ | : | ದಿನಾಂಕ : ೧೯-೧೨-೨೦೧೬ ರಂದು ನಡೆದ ೨೦೧೬-೧೭ನೇ ಸಾಲಿನ ೨ನೇ ತ್ರೈಮಾಸಿಕ ಹಣಕಾಸು ಸಮಿತಿ ಸಭೆ ನಡಾವಳಿಗೆ ಅನುಮೋದನೆ ನೀಡಿತು. |
| ೧೮೬.೨೩ | : | ಪತ್ರಿಕೋದ್ಯಮ ಹಾಗೂ ಸಂಗೀತ ಡಿಪ್ಲೊಮಾ ತರಗತಿಗಳ ಬೋಧನೆಗಾಗಿ ತಾತ್ಕಾಲಿಕ ಅಧ್ಯಾಪಕರ ಆಯ್ಕೆ ಪ್ರಕ್ರಿಯೆಗೆ ಸಭೆಯ ಅನುಮೋದನೆ ಕೋರಿ. |
| ನಿರ್ಣಯ | : | ಪತ್ರಿಕೋದ್ಯಮ ಹಾಗೂ ಸಂಗೀತ ಡಿಪ್ಲೊಮಾ ತರಗತಿಗಳ ಬೋಧನೆಗಾಗಿ ತಾತ್ಕಾಲಿಕ ಅಧ್ಯಾಪಕರ ಆಯ್ಕೆ ಪ್ರಕ್ರಿಯೆಗೆ ಸಭೆ ಅನುಮೋದನೆ ನೀಡಿತು. |

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಕುಲಸಚಿವರು | ಕುಲಪತಿಗಳು |
| ಪದನಿಮಿತ್ತ ಕಾರ್ಯದರ್ಶಿ | ಅಧ್ಯಕ್ಷರು |